**ಸಾಕ್ಷಿಗೆ ದಿಃ 12.09.2025 ರಂದು ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಸ್ ಜಿ ಪಿ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಶಪಥ ಪತ್ರದ ಮುಖಾಂತರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸರಿ ಇರುತ್ತದೆ. ಈಗ ನಾನು ನಿಪಿ-1 ಮೃತ್ಯು ಪತ್ರವನ್ನು ನೋಡುತ್ತಿದ್ದು ಸದರಿ ಮೃತ್ಯು ಪತ್ರವನ್ನು ಶಂಕರಪ್ಪರವರು ಬರೆದುಕೊಡುವಾಗ ನಾನು ಮತ್ತು ಮಂಜುನಾಥ ಹಾಜರಿದ್ದೆವು. ಸದರಿ ಮೃತ್ಯು ಪತ್ರದಲ್ಲಿ ಶಂಕರಪ್ಪರವರ ಹೆಬ್ಬೆಟ್ಟಿನ ಸಹಿಯನ್ನು ನೋಡಿ ಗುರತಿಸಿರುತ್ತಾರೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-1(ಬಿ) ಎಂದು ಗುರುತಾಗಿರುತ್ತದೆ. ಸಾಕ್ಷಿಯು ಮಂಜುನಾಥ ಇವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1(ಎ) ಎಂದು ಗುರುತಾಗಿರುತ್ತದೆ. ಸದರಿ ಶಂಕರಪ್ಪನವರು ನನ್ನ ಹಾಗೂ ಮಂಜುನಾಥ ಇವರ ಸಮಕ್ಷಮ ನಿಪಿ-1 ಮೃತ್ಯು ಪತ್ರಕ್ಕೆ ಹೆಬ್ಬೆಟ್ಟಿನ ಸಹಿ ಮಾಡಿರುತ್ತಾರೆ. ಶಂಕರಪ್ಪರವರು ಹೆಬ್ಬೆಟ್ಟಿನ ಸಹಿ ಮಾಡಿದ ನಂತರ ಸದರಿ ಮೃತ್ಯುಪತ್ರಕ್ಕೆ ನಾನು ಮತ್ತು ಮಂಜುನಾಥ, ಶಂಕರಪ್ಪನವರ ಸಮಕ್ಷಮ ಸಹಿ ಮಾಡಿರುತ್ತೇವೆ.

**ಪಾಟೀ ಸವಾಲುಃ** ನಿಪಿ-8 ನೋಟಿಸಿನ ಪ್ರಕಾರ ಯಾವುದೇ ಎದುರುದಾರರು ಹಾಜರಾಗದೇ ಇದ್ದ ಕಾರಣ ಸಾಕ್ಷಿಯ ಪಾಟೀ ಸವಾಲು ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

(ಕೆ. ಗುರುಪ್ರಸಾದ್)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.